**<u>2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**OS-12/2022** **PW-1**

**ದಿಃ 05.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಸಿ ಎಚ್ ಎಸ್ ವಕೀಲರಿಂದಃ**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ಅಂಡರಟೇಕಿಂಗ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ಸದರಿ ಪತ್ರಕ್ಕೆ ಪ್ರತಿವಾದಿಯರು ಸಹಿ ಮಾಡಿರುತ್ತಾರೆ ಹಾಗೂ ಸಾಕ್ಷಿಗಳಾಗಿ ರೇಖಾ ಮತ್ತು ರಾಮು ಎಂಬುವವರು ಸಹಿ ಮಾಡಿರುತ್ತಾರೆ. ಅವರುಗಳ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಪ್ರತಿವಾದಿಯರಿಗೆ ಕಳಿಸಿದ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ 2 ಎಂದು, ಎರಡು ಅಂಚೆ ರಶೀದಿಗಳನ್ನು ನಿಪಿ 3 ಮತ್ತು 4 ಎಂದು, ಎರಡು ಅಂಚೆ ಸ್ವೀಕೃತಿಗಳನ್ನು ನಿಪಿ 5 ಮತ್ತು 6 ಎಂದು, ಪ್ರತಿವಾದಿಯರು ನೀಡಿದ ಮರು ಉತ್ತರದ ಪ್ರತಿಯನ್ನು ನಿಪಿ 7 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**<u>2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.</u>**